M.V.C.No.404/ 2017                                   PW -1

ದಿನಾಂಕ 21.10.2021 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರ್ 2 ಪರ ವಕೀಲರಿಂದ :

ನಾನು ಟೈಲರಿಂಗ್ ವೃತ್ತಿ ಮಾಡುತ್ತಿದ್ದೇನೆ. ನನಗೆ 50 ವರ್ಷ ವಯಸ್ಸಾಗಿದೆ. ನನ್ನ ಬಳಿ ಆಧಾರ್ ಕಾರ್ಡ್ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಅಪಘಾತವಾದ ದಿನ ನಾನು ಹೊಸ ವರ್ಷದ ಪ್ರಾರ್ಥನೆಗಾಗಿ ಚರ್ಚಿಗೆ ಹೋಗಿದ್ದೆ ಆಗ ರಾತ್ರಿ 1.00 ಗಂಟೆ ಸಮಯವಾಗಿತ್ತು. ಅಪಘಾತವಾದ ದಿನ ನನ್ನ ಜೊತೆ ನನ್ನ ಯಜಮಾನರು ಇದ್ದರು. ನನ್ನ ಪ್ರಕಾರ ಅಪಘಾತವಾದ ದಿನ ನಾನು ರಸ್ತೆ ದಾಟುತ್ತಾ ಇದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿ ರಸ್ತೆ ದಾಟಲೆಂದು ನಿಂತಿದ್ದೆ ಎಂದು ನುಡಿಯುತ್ತಾರೆ. ಅಪಘಾತ ಪಡಿಸಿದ ವಾಹನ ಬೆಂಗಳೂರು ಕಡೆಯಿಂದ ಬಂದಿರುತ್ತದೆ. ನಾನು ಪುಟ್ ಬಾತ್ ನಲ್ಲಿ ರಸ್ತೆಯಿಂದ ತುಂಬಾ ದೂರ ನಿಂತಿದ್ದೆ. ನಾನು ನಿಂತಿದ್ದ ಪುಟ್ ಬಾತ್ ಮೇಲೆ ಮೋಟಾರು ಸೈಕಲ್ ನ ಚಾಲಕ ಬಂದು ನನಗೆ ಗುದ್ದಿರುತ್ತಾನೆ. ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ನೀಡಿರುವ ನಕ್ಷೆಯ ಪ್ರಕಾರ ನಾನು ರಸ್ತೆಯ ಮದ್ಯದಲ್ಲಿ ಇದ್ದೆ, ಸದರಿ ದಿನ ನಾನು ಮದ್ಯರಾತ್ರಿಯಲ್ಲಿ ನನ್ನ ಅಜಾಗುಕತೆಯಿಂದ ರಸ್ತೆಯನ್ನು ದಾಟುತ್ತಾ

ಇದ್ದುದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನಗೆ ಅಪಘಾತ ಪಡಿಸಿದೆ ಎನ್ನಲಾದ ವಾಹನ ಅಲ್ಲಿ ನಿಲ್ಲಿಸಿಲ್ಲ ನನಗೆ ಅಪಘಾತ ಪಡಿಸಿ ಹೊರಟು ಹೋಗಿರುತ್ತದೆ. ಆ ಸಮಯದಲ್ಲಿ ಕತ್ತಲು ಇದ್ದ ಕಾರಣ ಅಪಘಾತ ಪಡಿಸಿದ ವಾಹನ ಯಾವುದು ಮತ್ತು ಅದರ ನೊಂದಣಿ ಸಂಖ್ಯೆ ಗೊತ್ತಿಲ್ಲ ಎಂದರೆ ಸರಿ . ನನಗೆ 5 ದಿನದ ನಂತರ ವಾಹನ ಯಾವುದು ಎಂದು ಗೊತ್ತಾಯಿತು. ಇದೇ ವಾಹನ ಅಪಘಾತ ಪಡಿಸಿದೆ ಎಂದು ಅಪಘಾತವನ್ನು ನೋಡಿದ ಪ್ರತ್ಯಕ್ಷ ಸಾಕ್ಷಿಯವರು ಹೇಳಿರುತ್ತಾರೆ. ಪ್ರತ್ಯಕ್ಷ ಸಾಕ್ಷಿಯರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ. ಸದರಿ ವಾಹನದಲ್ಲಿ ಒಬ್ಬರೇ ಇದ್ದರು. ಸದರಿ ವಾಹನದಲ್ಲಿದ್ದವರು ಬೆಂಗಳೂರಿನವರು ಎಂದು ಹೇಳಿರುತ್ತಾರೆ. ಅಪಘಾತವಾದ ನಂತರ ನನ್ನನ್ನು ಮತ್ತು ನನ್ನ ಗಂಡನನ್ನು ನಮ್ಮ ಚರ್ಚಿನ ಮೆಂಬರ್ ಮೋಹನ್ ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ದಿನ ಈ ಸದರಿ ವಾಹನ ಅಪಘಾತ ಮಾಡಲಿಲ್ಲ ಬೇರೆ ವಾಹನ ಅಪಘಾತ ಪಡಿಸಿರುತ್ತದೆ, ಆದರೆ ನಾವು ಪೋಲಿಸರೊಂದಿಗೆ ಶಾಮೀಲಾಗಿ 5 ದಿನ ತಡವಾಗಿ ದೂರುನೀಡಿರುತ್ತೇವೆ ಮತ್ತು ಈಅರ್ಜಿಯಲ್ಲಿ ಹೇಳಿದ ವಾಹನವನ್ನು ಕೇಸಿನಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಯಾಜಮಾನರಿಗೂ ಸಹ ಯಾವ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದು ತಕ್ಷಣದಲ್ಲಿ ಗೊತ್ತಾಗಿರುವುದಿಲ್ಲ. ನನಗೆ ಅಪಘಾತದಿಂದ ಯಾವುದೇ ಮೂಳೆ

ಮುರಿತ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರನ್ನು ನ್ಯಾಯಾಲಯಕ್ಕೆ ಕರೆತಂದು ಸಾಕ್ಷ್ಯ ನೀಡಿಸಲು ತೊಂದರೆ ಇಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಅಪಘಾತಕ್ಕಿಂತ ಮುಂಚೆ ತಿಂಗಳಿಗೆ 20 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಏನು ಕೆಲಸ ಮಾಡುತ್ತಿದ್ದೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನೀಡಿಲ್ಲ, ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ